**ಪಾಠ-4** **ಏಪ್ರಿಲ್ 16-22**

# ಜಲಪ್ರಳಯ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾಂಡ 13-7:10, 2 ಪೇತ್ರ 2:5-9, ಆ.ಕಾಂಡ 7, ರೋಮ 6:1-6, ಕೀರ್ತನೆ 106:4, ಆ.ಕಾಂಡ 8, ಆ.ಕಾಂಡ 9:1-17.

ಸ್ಮರಣವಾಕ್ಯ : ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವುದು (ಮತ್ತಾಯ 24:37).

ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ ಅವರು ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಬರಿ ಕೆಟ್ಟದಾಗಿರುವುದನ್ನೂ ಯೆಹೋವನು ನೋಡಿದನು (ಆ.ಕಾಂಡ 6:5). ನೋಡಿದನು ಎಂಬ ಕ್ರಿಯಾಪದವು ಓದುಗನನ್ನು ಸೃಷ್ಟಿಯ ಪ್ರತಿಯೊಂದು ಹಂತಕ್ಕೂ ಮತ್ತೆ ಕರೆದೊಯ್ಯುತ್ತದೆ. ಆದರೆ ದೇವರು ಒಳ್ಳೇದೆಂದು ನೋಡುವ ಬದಲು ಕೆಟ್ಟದೆಂದು ನೋಡುವವನಾಗಿದ್ದಾನೆ (ಆ.ಕಾಂಡ 6:5) ಲೋಕದಲ್ಲಿ ಕೆಟ್ಟತನವು ತುಂಬಿಕೊಂಡಿರಲಾಗಿ ಅದನ್ನು ಸೃಷ್ಟಿ ಮಾಡಿದ ಕಾರಣಕ್ಕೆ ದೇವರು ವಿಷಾದ ಪಟ್ಟುಕೊಂಡಂತೆ ಕಾಣುತ್ತದೆ (ಆ.ಕಾಂಡ 6:6,7).

ಆದಾಗ್ಯೂ ಆತನ ವಿಷಾದವು ರಕ್ಷಣೆಯ ಅಂಶಗಳನ್ನು ಸಹಾ ಒಳಗೊಂಡಿದೆ. ಇಬ್ರಿಯ ಪದ 'ನಖಮ್' (ನೊಂದುಕೊಳ್ಳುವುದು) ನೋಹ ಎಂಬ ಹೆಸರಿನಲ್ಲಿ ಮಾರ್ದನಿಸುತ್ತದೆ. ನೋಹ ಎಂದರೆ 'ಆದರಣೆ' ಎಂದು ಅರ್ಥಕೊಡುತ್ತದೆ (ಆ.ಕಾಂಡ

* **ಈ ಪಾಠವನ್ನು ಏಪ್ರಿಲ್ 23ರ ಸಬ್ಬತ್ತಿಗೆ ಸಿದ್ಧಪಡಿಸಲಾಗಿದೆ.**

5:29). ದುಷ್ಟತ್ವಕ್ಕೆ ದೇವರು ತೋರಿದ ಪ್ರತಿಕ್ರಿಯೆಗೆ ಎರಡು ಮುಖಗಳಿವೆ. ಒಂದನೆಯದಾಗಿ ಇದು ನ್ಯಾಯವು ಒಡ್ಡುವ ಅಪಾಯವನ್ನು ಹೊಂದಿದೆ ನ್ಯಾಯವು ಕೆಲವರಿಗೆ ಶಿಕ್ಷೆಯನ್ನು ಕೊಟ್ಟು ನಾಶಕ್ಕೆ ನಡೆಸುತ್ತದೆ, ಆದಾಗ್ಯೂ ಆತನ ಪ್ರತಿಕ್ರಿಯೆಯು ಮತ್ತೆ ಕೆಲವರಿಗೆ ಆದರಣೆ ಮತ್ತು ಕರುಣೆಯನ್ನು ನೀಡಿ ರಕ್ಷಣೆಗೆ ನಡೆಸುವ ವಾಗ್ದಾನವನ್ನು ಸಹಾ ಹೊಂದಿದೆ.

ಈ ಎರಡೂ ಸ್ವರಗಳನ್ನು (ದನಿಗಳು) ಈಗಾಗಲೇ ಕಾಯಿನನು ಮತ್ತು ಹೇಬೆಲನ (ನಂತರ ಸೇತುವಿನ) ಜೀವಿತದಲ್ಲಿ ಕೇಳಿಸಿಕೊಂಡಿದ್ದೇವೆ. ಈ ಭಿನ್ನತೆಯು ದೇವಪುತ್ರರು (ಸೇತನ ಸಂತಾನ) ಮತ್ತು ಮನುಷ್ಯಪುತ್ರರು (ಕಾಯಿನನ ಸಂತಾನ) ನಡುವೆ ಮುಂದುವರೆದುಕೊಂಡು ಬಂದಿದೆ. ಈಗ ದೇವರು ನೋಹನನ್ನು ಲೋಕದ ಜನರಿಂದ ಪ್ರತ್ಯೇಕಪಡಿಸುವಾಗ ಮತ್ತೆ ಭಿನ್ನಸ್ವರವನ್ನು ನಾವು ಕೇಳುತ್ತೇವೆ.

**ಭಾನುವಾರ** **ಏಪ್ರಿಲ್ 17**

## ಜಲಪ್ರಳಯಕ್ಕಾಗಿ ಮಾಡಿದ ಪೂರ್ವಸಿದ್ಧತೆ

ಆದಿಕಾಂಡ 6:13–7:10ನೇ ವಚನಗಳವರೆಗೆ ಓದಿರಿ. ಮಾನವನ ಪೂರ್ವಕಾಲದ ಚರಿತ್ರೆಯ ಸೋಜಿಗದ ವಿವರಣೆಯಿಂದ ನಾವು ಯಾವ ಪಾಠವನ್ನು ಕಲಿಯಬಹುದು?

ದಾನಿಯೇಲನಂತೆಯೇ ನೋಹನೂ ಸಹಾ ಈ ಲೋಕದ ಅಂತ್ಯದ ಭವಿಷ್ಯವನ್ನು ನುಡಿದ ಪ್ರವಾದಿಯಾಗಿದ್ದನು. ನಾವೆ ಎಂಬುದರ ಇಬ್ರಿಯ ಪದವು 'ಟೆವಾಹ್' (ಆದಿಕಾಂಡ 6:14) ಐಗುಪ್ತ ಭಾಷೆಯ ಎರವಲು ಪಡೆದ ಪದವಾಗಿದ್ದು ಐಗುಪ್ತದಿಂದ ಇಸ್ರಾಯೇಲನ್ನು ಸಂರಕ್ಷಿಸುವ ಸಲುವಾಗಿ ಮೋಶೆಯನ್ನು ಮಗುವಾಗಿದ್ದಾಗ ಬಚ್ಚಿಟ್ಟುಕೊಳ್ಳಲಾಗದೆ ನೈಲ್ ನದಿಯಲ್ಲಿ ತೇಲಿಬಿಟ್ಟ ಜಂಬುಹುಲ್ಲಿನ ಪೆಟ್ಟಿಗೆಗೆ ಸಮಾನ ಪದವಾಗಿದೆ (ವಿ.ಕಾಂಡ 2:3).

ಇನ್ನೂ ಕೆಲವರು ನಾವೆಯ ಸಾಮಾನ್ಯ ಸಂರಚನೆಯನ್ನು ಮಂಜೂಷ ಪೆಟ್ಟಿಗೆಗೂ ಸಹಾ ಹೋಲಿಸುತ್ತಾರೆ (ವಿ.ಕಾಂಡ 25:10). ಯಾವ ರೀತಿಯಾಗಿ ಮಾನವರನ್ನು ಉಳಿಸಲು ಸಹಾಯ ಮಾಡಿತೋ ಹಾಗೆಯೇ ದೇವರ ಪ್ರಸನ್ನತೆಯು ಗುರುತಾಗಿರುವ ಮಂಜೂಷ ಪೆಟ್ಟಿಗೆಯು (ವಿ.ಕಾಂಡ 25:22) ತನ್ನ ಜನರನ್ನು ರಕ್ಷಿಸಲು ದೇವರು ಮಾಡಿದ ಕಾರ್ಯದ ಕಡೆಗೆ ದೃಷ್ಟಿಯನ್ನು ನೆಡುವಂತೆ ಮಾಡುತ್ತದೆ.

ದೇವರು ಅಪ್ಪಣೆ ಕೊಟ್ಟ ಪ್ರಕಾರವೇ ನೋಹನು ಮಾಡಿದನು ಎಂಬ ಪದವೃಂದವು (ಆ.ಕಾಂಡ 6:22) ಪೂರ್ವಸಿದ್ಧತೆಯ ಭಾಗವನ್ನು ಮುಕ್ತಾಯಕ್ಕೆ ತರುತ್ತದೆ. ಇಬ್ರಿಯ ಕ್ರಿಯಾಪದ 'ಅಸಾಹ್' ನೋಹನು ಮಾಡಿದ ಕೆಲಸವನ್ನು ಸೂಚಿಸುತ್ತದೆ, ದೇವರು (ಆ.ಕಾಂಡ 6:14)ರಲ್ಲಿ ಹೇಳಿರುವ ಆಜ್ಞೆ 'ಮಾಡಿಕೋ' ಎಂಬುದಕ್ಕೆ ಪ್ರತಿಕ್ರಿಯೆಯಾಗಿದೆ ದೇವರ ಆಜ್ಞೆಗೂ ನೋಹನ ಪ್ರತಿಕ್ರಿಯೆಗೂ ನಡುವೆ ಇರುವ ಪ್ರತಿಧ್ವನಿಯು ನೋಹನ ಸಂಪೂರ್ಣ ವಿಧೇಯತೆಯನ್ನು ಸೂಚಿಸುತ್ತದೆ. 'ಅಸಾಹ್' ಪದವು ಮಂಜೂಷ ಪೆಟ್ಟಿಗೆಯನ್ನು ಮಾಡುವ ಸಂದರ್ಭದಲ್ಲೂ ಬಳಕೆಯಾಗಿರುವುದು ಸ್ವಾರಸ್ಯಕರವಾಗಿದೆ (ವಿ.ಕಾಂಡ 39:32, 42 ಮತ್ತು ವಿ.ಕಾಂಡ 40:16).

ದೇವರು ನೋಹನಿಗೆ ನಾವೆಯ ನಿಖರವಾದ ಅಳತೆಗಳನ್ನು ಕೊಟ್ಟು ಪ್ರತಿ ರೀತಿಯಲ್ಲೂ ಕಟ್ಟಬೇಕಾದ ಕಟ್ಟಣಕ್ಕೆ ಅಗತ್ಯವಾದ ಸ್ಪಷ್ಟವಾದ ನಿರ್ದೇಶನಗಳನ್ನು ನೀಡಿದನು. ಅಂತಹ ಗಟ್ಟಿಮುಟ್ಟಾದ ಮತ್ತು ಬಾಳಿಕೆ ಬರುವ ಕಟ್ಟಡವನ್ನು ಮಾನವ ಜ್ಞಾನವು ಯೋಜಿಸಲಾರದು. ದೇವರು ಅದರ ವಿನ್ಯಾಸಗಾರನಾಗಿದ್ದನು ಮತ್ತು ನೋಹನು ಅದನ್ನು ಕಟ್ಟುವ ಪ್ರಧಾನ ಶಿಲ್ಪಿಯಾಗಿದ್ದನು" – ಎಲೆನ್ ಜಿ ವೈಟಮ್ಮನವರ "ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು" ಪುಸ್ತಕದಲ್ಲಿ 92ನೇ ಪುಟ.

ಎರಡು ನಾವೆಗಳಲ್ಲಿರುವ (ಪೆಟ್ಟಿಗೆ) ಸಾಮ್ಯತೆಯು ಅವುಗಳಲ್ಲಿರುವ ಸಾಮಾನ್ಯವಾದ ವಿಮೋಚಕ ಕಾರ್ಯವನ್ನು ಮರುದೃಢೀಕರಿಸುತ್ತದೆ. ನೋಹನ ವಿಧೇಯತೆಯನ್ನು ದೇವರ ರಕ್ಷಣಾ ಯೋಜನೆಯ ಅಂಗವೆಂದು ವರ್ಣಿಸಬಹುದಾಗಿದೆ. ದೇವರು ಮಾಡು ಎಂದು ಆಜ್ಞೆಮಾಡಿದುದಕ್ಕೆ ನೋಹನು ಸುಮ್ಮನೆ ಮಾಡುವ ನಂಬಿಕೆಯನ್ನು ಹೊಂದಿದ್ದ ಕಾರಣದಿಂದಲೇ ಆತನು ರಕ್ಷಿಸಲ್ಪಟ್ಟನು (ಇಬ್ರಿಯ 11:7ನ್ನು ನೋಡಿರಿ0.

ವಿಧೇಯತೆಯಲ್ಲಿ ವ್ಯಕ್ತವಾಗುವ ನಂಬಿಕೆಯನ್ನು ಹೊಂದಿರುವುದಕ್ಕೆ ನೋಹನು ಮೊದಲ ಉದಾಹರಣೆಯಾಗಿದ್ದಾನೆ, ಅಂತಹ ನಂಬಿಕೆತಾನೆ ಮುಖ್ಯವಾದುದು ಆಗಿದೆ (ಯಾಕೋಬನು 2:20).

ಸಂಕ್ಷಿಪ್ತವಾಗಿ ಹೇಳುವುದಾದರೆ, ನೋಹನು ದೇವರ ದೃಷ್ಟಿಯಲ್ಲಿ ಕೃಪೆ ಹೊಂದಿದವನಾದಾಗ್ಯೂ (ಆ.ಕಾಂಡ 6:8) ಆ ಕೃಪೆಗೆ ಪ್ರತಿಕ್ರಿಯೆ ತೋರುವವನಾಗಿ ದೇವರ ಆಜ್ಞೆಗೆ ನಂಬಿಗಸ್ತನಾಗಿ ಮತ್ತು ವಿಧೇಯನಾಗಿ ನಡೆದುಕೊಂಡನು. ನಮ್ಮ ವಿಷಯದಲ್ಲೂ ಸಹಾ ಇದು ಹೀಗೆಯೇ ಇರಬೇಕಲ್ಲವೇ?

2 ಪೇತ್ರ 2:5–9 ವಚನಗಳನ್ನು ಓದಿರಿ. ನೋಹನ ಕುಟುಂಬವು ಮಾತ್ರ ರಕ್ಷಿಸಲ್ಪಟ್ಟಿತು ಯಾಕೆ? ಬರುತ್ತಿರುವ ನ್ಯಾಯವಿಚಾರಣೆಯ ವಿಷಯದಲ್ಲಿ ಲೋಕಕ್ಕೆ ಎಚ್ಚರಿಕೆಕೊಡಬೇಕಾದ ನಮ್ಮ ಪಾತ್ರದ ಬಗ್ಗೆ ನೋಹನ ಕಥೆಯಲ್ಲಿ ನಾವು ಯಾವ ಪಾಠವನ್ನು ಕಲಿಯಬಹುದು?

**ಸೋಮವಾರ** **ಏಪ್ರಿಲ್ 18**

## ಜಲಪ್ರಳಯದ ಘಟನೆ

ನೋಹನ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದ 'ಅಸಾಹ್' ಎಂಬುದು ಆದಿಕಾಂಡದ ಸೃಷ್ಟಿಯ ವಿವರಣೆಯಲ್ಲೂ ಪ್ರಧಾನವಾದುದಾಗಿದೆ (ಆ.ಕಾಂಡ 1:7, 16,25,26,31; ಆ.ಕಾಂಡ 2:2). ನೋಹನ ದೇವರಿಗೆ ತೋರಿಸಿದ ವಿಧೇಯ ಕ್ರಿಯೆಗಳು ದೇವರ ಸೃಷ್ಟಿಯ ಕಾರ್ಯಗಳಂತಿವೆ.

ಇದರಿಂದ ನಾವು ಏನನ್ನು ತೆಗೆದುಕೊಳ್ಳಬೇಕೆಂದರೆ ದೇವರು ಜಲಪ್ರಳಯದಿಂದ ಮನುಷ್ಯರನ್ನು ಕೇವಲ ನಾಶಪಡಿಸುವುದು ಮಾತ್ರವಲ್ಲ ಅದರಿಂದ ರಕ್ಷಿಸುವುದು ಸಹಾ ಆಗಿದೆ.

ಆದಿಕಾಂಡ 7ನೇ ಅಧ್ಯಾಯವನ್ನು ಓದಿರಿ. ಜಲಪ್ರಳಯದ ವಿವರಣೆಯು ನಮಗೆ ಸೃಷ್ಟಿಯ ವಿವರಣೆಯನ್ನು ನೆನಪಿಗೆ ತರುತ್ತದೆ ಯಾಕೆ? ಈ ಎರಡು ಘಟನೆಗಳ ನಡುವೆ ಇರುವ ಸಾಮ್ಯತೆಗಳಿಂದ ನಾವು ಯಾವ ಪಾಠವನ್ನು ಕಲಿಯಬಹುದಾಗಿದೆ?

ಜಲಪ್ರಳಯವನ್ನು ವಿವರಿಸುವ ವಚನಗಳನ್ನು ಗಮನವಿಟ್ಟು ಓದಿದಾಗ ಸೃಷ್ಟಿಯ ಕಥೆಯಲ್ಲಿ ಉಪಯೋಗವಾಗಿರುವ ಅನೇಕ ಪದಗಳು ಮತ್ತು ಮಾತುಗಳು ಸಾಮಾನ್ಯವಾಗಿ ಉಪಯೋಗ ಆಗಿರುವದನ್ನು ಕಾಣುತ್ತೇವೆ.

7ರ ಬಗ್ಗೆ (ಆ.ಕಾಂಡ 7:2,3,4,10 ವಚನಗಳನ್ನು ಆದಿಕಾಂಡ 2:1–3 ವಚನಗಳೊಂದಿಗೆ ಹೋಲಿಸಿರಿ), ಗಂಡು ಹೆಣ್ಣಿನ ಬಗ್ಗೆ– (ಆ.ಕಾಂಡ 7:2,3,9,16 ವನ್ನು ಆ.ಕಾಂಡ 1:27ರ ಜೊತೆ ಹೋಲಿಸಿರಿ), ಪ್ರಾಣಿಗಳು ಮತ್ತು ಪಕ್ಷಿಗಳ ಮತ್ತು ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳ ಬಗ್ಗೆ (ಆ.ಕಾಂಡ 7:8,14, 21,23ನ್ನು ಆ.ಕಾಂಡ 1,24,25ರ ಜೊತೆ ಹೋಲಿಸಿರಿ), ಜೀವಶ್ವಾಸದ ಬಗ್ಗೆ ಆ.ಕಾಂಡ 7:15,22ನ್ನು ಆದಿಕಾಂಡ 2:70ರ ಜೊತೆ ಹೋಲಿಸಿರಿ).

ಜಲಪ್ರಳಯದ ವಚನಗಳು ಸೃಷ್ಟಿಯ ವಚನಗಳಂತೆಯೇ ವಾಚನ ಮಾಡುತ್ತವೆ. ಈ ಸೃಷ್ಟಿಯ ವಿವರಣೆಗಳ ಪ್ರತಿಧ್ವನಿಯು ಸೃಷ್ಟಿಕರ್ತನಾದ ದೇವರು ಮತ್ತು ಅದನ್ನು ನಾಶಪಡಿಸುವ ದೇವರು ಒಂದೇ ಎಂಬುದನ್ನು ತೋರ್ಪಡಿಸುತ್ತದೆ (ಧ.ಕಾಂಡ 32:39). ಆದರೆ ಈ ಪ್ರತಿಧ್ವನಿಯು ನಿರೀಕ್ಷೆಯ ಸಂದೇಶವನ್ನು ಸಹಾ ನಮಗೆ ತಿಳಿಸಿಕೊಡುತ್ತವೆ. ಜಲಪ್ರಳಯವು ಹೊಸ ಸೃಷ್ಟಿಯ ಸಲುವಾಗಿ ಮಾಡಲ್ಪಟ್ಟಿತು. ಇದು ನೀರಿನಿಂದ ಹೊಸ ಅಸ್ತಿತ್ವಕ್ಕೆ ನಡೆಸುವಂಥದ್ದಾಗಿತ್ತು.

ನೀರಿನ ಚಲನೆಯು ಆದಿಕಾಂಡ ಸೃಷ್ಟಿಯ ಘಟನೆಯು ಆದಿಕಾಂಡ 1ನೇ ಅಧ್ಯಾಯದ ಸೃಷ್ಟಿಯ ಹಿಮ್ಮುಖವಾದ ಕ್ರಿಯೆಯಾಗಿದೆ. ಆದಿಕಾಂಡ 1ನೇ ಅಧ್ಯಾಯದಲ್ಲಿ ಕೆಳಗಣ ನೀರುಗಳನ್ನು ಮೇಲಣ ನೀರುಗಳನ್ನು ಬೇರೆ ಬೇರೆ ಮಾಡುವುದಕ್ಕೆ ವಿರುದ್ಧವಾಗಿ ಜಲಪ್ರಳಯವು ಅವುಗಳ ಸಮಾಗಮ (ಕೂಡಿಕೊಳ್ಳುವುದು) ವಾಗಿದೆ (ಆ.ಕಾಂಡ 7:11).

ಈ ಪ್ರಕ್ರಿಯೆಯು ಒಂದು ವಿರೋಧಬಾಸದ ಸಂದೇಶವನ್ನು ತಿಳಿಯಪಡಿಸುತ್ತದೆ: ದೇವರು ಮೊದಲಿದ್ದುದನ್ನು ನಾಶಪಡಿಸಿ ನಂತರ ಆಗುವ ಹೊಸಸೃಷ್ಟಿಗೆ ಅವಕಾಶ ಮಾಡಿಕೊಟ್ಟನು. ಭೂಮಿಯು ಹೊಸದಾಗಿ ಸೃಷ್ಟಿಯಾಗಬೇಕಾದರೆ ಹಳೆಯದುದರ ನಾಶನವು ಅಗತ್ಯವಾಗುತ್ತದೆ. ಜಲಪ್ರಳಯದ ಘಟನೆಯು ಲೋಕವು ಅಂತ್ಯಕಾಲದಲ್ಲಿ ರಕ್ಷಣೆ ಹೊಂದುವದರ ಮುನ್ನೋಟವನ್ನು ಕೊಡುತ್ತದೆ. "ತರುವಾಯ ನೂತನಾಕಾಶ ಮಂಡಲವನ್ನೂ ನೂತನ ಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು ಎಂಬುದಾಗಿ ಹೇಳುತ್ತದೆ" (ಪ್ರಕ 21:1ನ್ನು ಯೆಶಾಯ 65:67 ರೊಂದಿಗೆ ಹೋಲಿಸಿರಿ).

ನಮ್ಮ ಹೊಸ ಸೃಷ್ಟಿಯಾಗಬೇಕಾದಲ್ಲಿ ಈವಾಗ ನಮ್ಮಲ್ಲಿರುವ ಯಾವುದು ನಾಶವಾಗಬೇಕಾದ ಅಗತ್ಯವಿದೆ? (ರೋಮ 6:1–6ನ್ನು ನೋಡಿರಿ).

**ಮಂಗಳವಾರ** **ಏಪ್ರಿಲ್ 19**

## ಜಲಪ್ರಳಯದ ಅಂತ್ಯ

ಆದಿಕಾಂಡ 7:22–24 ವಚನಗಳು ಇಡೀ ಭೂಮಿಯನ್ನೇ ಮುಳುಗಿಸಿ ಬಿಟ್ಟ ಜಲಪ್ರಳಯ ಹೇಗೆ ಎಲ್ಲಾ ಜೀವರಾಶಿಗಳನ್ನು ನಾಶಪಡಿಸಿತು ಎಂಬುದನ್ನು ಬಣ್ಣಿಸುತ್ತವೆ (ಆದಿಕಾಂಡ 7:23). ನೀರು ಭೂಮಿಯ ಮೇಲೆ ನೂರೈವತ್ತು ದಿನಗಳವರೆಗೆ

ಪ್ರಬಲವಾಯಿತು (ಆ.ಕಾಂಡ 7:24). ಇಂತಹ ಘೋರವಾದ ನಿರಾಶೆಕವಿದ ಪರಿಸ್ಥಿತಿಯಲ್ಲಿ "ದೇವರು ಜ್ಞಾಪಕ ಮಾಡಿಕೊಂಡನು" (ಆ.ಕಾಂಡ 8:1) ಎಂಬುದನ್ನು ನೋಡುತ್ತೇವೆ.

ಜಲಪ್ರಳಯದ ಸಂದೇಶವನ್ನು ಹೊಂದಿರುವ ವಾಕ್ಯವೃಂದದ ಮಧ್ಯೆ ಭಾಗದಲ್ಲಿ 'ದೇವರು ಜ್ಞಾಪಕ ಮಾಡಿಕೊಂಡನು' ಎಂಬ ಪದವೃಂದವು ಬರೆಯಲ್ಪಟ್ಟಿದೆ. ಇದು ತಾನೇ ಜಲಪ್ರಳಯದ ಸಂದೇಶ ಎಂಬ ಆಲೋಚನೆಯನ್ನು ಸೂಚಿಸುತ್ತದೆ.

ಆದಿಕಾಂಡ 8:1ನೇ ವಚನವನ್ನು ಓದಿರಿ. ದೇವರು ನೋಹನನ್ನು ನೆನಪಿಗೆ ತಂದುಕೊಂಡನು ಎಂಬುದರ ಅರ್ಥವೇನು?

ನೆನಪಿಗೆ ತಂದುಕೊಂಡನು ಎಂಬುದರ ಇಬ್ರಿಯ ಕ್ರಿಯಾಪದ 'ಝುಕರ್' ಎಂದರೆ ದೇವರು ಮರೆತುಕೊಂಡಿಲ್ಲ ಎಂಬ ಅರ್ಥಕೊಡುತ್ತದೆ. ಇದು ಮಾನಸಿಕ ಕ್ರಿಯೆಗಿಂತ ಹೆಚ್ಚಿನದಾಗಿದೆ. ಸತ್ಯವೇದಾನುಸಾರವಾಗಿ ಹೇಳುವುದಾದರೆ 'ದೇವರು ನೆನಪಿಗೆ ತಂದುಕೊಂಡನು' ಎಂದರೆ ಆತನು ತನ್ನ ವಾಗ್ದಾನವನ್ನು ನೆರವೇರಿಸುತ್ತಾನೆಂದು ಬಹಳ ಸಲ ರಕ್ಷಣೆಯನ್ನು ಸೂಚಿಸುವಂಥದ್ದಾಗಿದೆ (ಆ.ಕಾಂಡ 19:29ನ್ನು ನೋಡಿರಿ). ಜಲಪ್ರಳಯದ ಸಂದರ್ಭದಲ್ಲಿ "ದೇವರು ನೆನಪಿಗೆ ತಂದುಕೊಂಡನು" ಎಂಬುದು ನೀರು ನಿಂತಿತು (ಆ.ಕಾಂಡ 8:2) ಮತ್ತು ನೋಹನು ಬಿಟ್ಟು ಹೊರಬರುವಂತಾಯ್ತು ಎಂಬ ಅರ್ಥವನ್ನು ಕೊಡುತ್ತದೆ (ಆ.ಕಾಂಡ 8:16).

ನಾವೆಯನ್ನು ಬಿಟ್ಟು ಹೊರಬರುವುದಕ್ಕೆ ಯಾವುದೇ ಆಜ್ಞೆಯು ನೇರವಾಗಿ ಕೊಡಲ್ಪಡದಿದ್ದಾಗ್ಯೂ ನೋಹನು ತಾನೇ ಮನಸ್ಸಿನಲ್ಲಿ ತೀರ್ಮಾನ ತೆಗೆದುಕೊಂಡು ನೀರು ನೆಲವನ್ನು ತೆರೆವುಗೊಳಿಸಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಮೊದಲು ಕಾಗೆಯನ್ನು ನಂತರ ಪಾರಿವಾಳವನ್ನು ಹಾರಿಬಿಡುತ್ತಾನೆ. ಕಡೆಯದಾಗಿ ಪಾರಿವಾಳವು ತಿರುಗಿ ನಾವೆಗೆ ಬಾರದೇ ಹೋದಾಗ ನೋಹನು ನೌಕೆಯ ಗವಸಣಿಗೆಯನ್ನು ತೆರೆದು ನೋಡಿದಾಗ ಭೂಮಿಯ ಒಣಗಿರುತ್ತದೆ (ಆ.ಕಾಂಡ 8:13).

ನಿಜ ಜೀವನಕ್ಕೆ ಬೇಕಾದ ಪಾಠಗಳು ನೋಹನ ವರ್ತನೆಯಲ್ಲಿ ಸಮೃದ್ಧವಾಗಿವೆ. ಒಂದುಕಡೆ, ದೇವರು ನಮಗೆ ನೇರವಾಗಿ ಮಾತಾಡದಿದ್ದರೂ ಆತನ ಮೇಲೆ

ಭರವಸವಿಡುವುದನ್ನು ಬೋಧಿಸುತ್ತದೆ, ಮತ್ತೊಂದು ಕಡೆ ನಂಬಿಕೆಯು ನಮ್ಮ ಆಲೋಚನೆಯನ್ನು, ಪರೀಕ್ಷೆ ಮಾಡುವ ಬುದ್ಧಿಯನ್ನು (ಮೌಲ್ಯವನ್ನು) ಅಲ್ಲಗಳೆಯುವುದಿಲ್ಲ.

ನಂಬಿಕೆಯು ನಾವು ಅರಿತಿರುವುದು ಸರಿಯೆ ಎಂದು ತಿಳಿದುಕೊಳ್ಳುವ ಪ್ರಯತ್ನದಿಂದಾಗಲಿ ಹಾಗೆ ಆಲೋಚಿಸುವ ಕರ್ತವ್ಯದಿಂದಾಗಲಿ ನಮ್ಮನ್ನು ಹೊರತುಪಡಿಸುವುದಿಲ್ಲ.

ಆದಾಗ್ಯೂ ಅಂತಿಮವಾಗಿ ದೇವರು ಹೇಳಿದಾಗ ನೋಹನು ನಾವೆಯಿಂದ ಹೊರಕ್ಕೆ ಬರುತ್ತಾನೆ (ಆ.ಕಾಂಡ 8:15–19). ತಾನು ಹೊರಗಡೆ ಹೋಗುವುದು ಕ್ಷೇಮ ಎಂದು ನೋಹನಿಗೆ ಗೊತ್ತಾಗಿದ್ದರೂ ಆತನು ನೌಕೆಯನ್ನು ಬಿಟ್ಟು ಹೊರಬರುವುದಕ್ಕೆ ದೇವರ ಮೇಲೆ ಭರವಸೆಯಿಟ್ಟು ಆತನ ಅನುಮತಿಗಾಗಿ ಕಾಯುತ್ತಾನೆ. ಆತನು ಸಹನೆಯಿಂದ ನಾವೆಯೊಳಗೆ ಕಾಯುತ್ತಾನೆ. ಹೇಗೆ ದೇವರ ಅಪ್ಪಣೆಯ ಮೇರೆಗೆ ನಾವೆಯೊಳಗೆ ಪ್ರವೇಶ ಮಾಡಿದನೋ ಹಾಗೆಯೇ ದೇವರ ವಿಶೇಷವಾದ ನಿರ್ದೇಶನದ ಮೇರೆಗೆ ಹೊರಬರುವುದಕ್ಕೆ ಕಾಯುತ್ತಾನೆ. ಕಡೆಯಲ್ಲಿ ದೇವದೂತನೊಬ್ಬನು ಪರಲೋಕದಿಂದ ಇಳಿದುಬಂದು ನಾವೆಯ ಹೆಬ್ಬಾಗಿಲನ್ನು ತೆರೆದು ನೋಹನನ್ನು ಮತ್ತು ಆತನ ಕುಟುಂಬವನ್ನು ಎಲ್ಲಾ ಜೀವರಾಶಿಗಳೊಂದಿಗೆ ಭೂಮಿಯ ಮೇಲೆ ಇಳಿದುಬರಬೇಕೆಂದು ಅಪ್ಪಣೆ ಮಾಡಿದನು" ಎಲೆನ್ ಜಿ ವೈಟಮ್ಮನವರ "ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು" ಪುಸ್ತಕದಲ್ಲಿ 105ನೇ ಪುಟ.

ಆದಿಕಾಂಡ 8:1, ಆದಿಕಾಂಡ 19:29 ಮತ್ತು ಕೀರ್ತನೆ 106:4 ವಚನಗಳನ್ನು ಓದಿರಿ. "ದೇವರು ತನ್ನ ನೆನಪಿಗೆ ತಂದುಕೊಂಡನು" ಎಂಬ ಪದವೃಂದದ ಅರ್ಥವೇನು? ದೇವರು ನಿಮ್ಮನ್ನು ತನ್ನ ನೆನಪಿಗೆ ಹೇಗೆ ಕೊಂಡಿದ್ದಾನೆ ಎಂಬುದನ್ನು ನಿಮಗೆ ತೋರಿಸಿರುವಾಗ ಈ ಸತ್ಯವು ನಮಗೆ ಯಾವ ಅರ್ಥವನ್ನು ಕೊಡುತ್ತದೆ?

**ಬುಧವಾರ** **ಏಪ್ರಿಲ್ 20**

## ಒಡಂಬಡಿಕೆ : ಭಾಗ–1

ಇದು ಈವಾಗ ದೇವರು ತಾನು ಮಾಡಿದ ವಾಗ್ದಾನವನ್ನು ನೆರವೇರಿಸುವ ಸಂದರ್ಭವಾಗಿತ್ತು. "ನಿನ್ನ ಕೂಡ ನಾನು ನನ್ನ ನಿಬಂಧನೆಯನ್ನು ಮಾಡುತ್ತೇನೆ.

ನೀನು ಹೆಂಡತಿಮಕ್ಕಳು ಸೊಸೆಯರು ಸಹಿತವಾಗಿ ನಾವೆಯಲ್ಲಿ ಸೇರಬೇಕು" (ಆ.ಕಾಂಡ 6:18). ನಾಶಪಡಿಸುವ ದೇವರ ಬೆದರಿಕೆಗೆ ಪ್ರತಿಯಾಗಿ ಈ ಒಡಂಬಡಿಕೆಯು ಜೀವನವನ್ನು ವಾಗ್ದಾನ ಮಾಡುವ ಒಡಂಬಡಿಕೆಯಾಗಿತ್ತು.

ಆದಿಕಾಂಡ 8:20ನ್ನು ಓದಿರಿ. ನೋಹನು ನಾವೆಯ ಹೊರಕ್ಕೆ ಹೋದಕೂಡಲೇ ಆತನು ಮಾಡಿದ ಮೊದಲ ಕೆಲಸವೇನು ಮತ್ತು ಅದನ್ನು ಯಾಕೆ ಮಾಡಿದನು?

ಸೃಷ್ಟಿಯ ಕಾರ್ಯದಲ್ಲಿ ಆರುದಿನಗಳು ಕಳೆದ ಬಳಿಕ ಆದಾಮ ಮತ್ತು ಹವ್ವಳು ನಿಶ್ಚಯವಾಗಿ ದೇವರನ್ನು ಸಬ್ಬತ್ತಿನ ದಿನದಲ್ಲಿ ಆರಾಧಿಸಿದಂತೆಯೇ, ಮತ್ತೊಂದು ಮರುಸೃಷ್ಟಿಯ ಘಟನೆಯಾಗಿರುವ ಜಲಪ್ರಳಯವಾದ ಕೂಡಲೇ ನೋಹನು ದೇವರನ್ನು ಆರಾಧಿಸಿದನು. ಏನೇ ಇರಲಿ ಈ ಆರಾಧನೆಯ ಎರಡು ಕಾರ್ಯಗಳ ನಡುವೆ ಒಂದು ವ್ಯತ್ಯಾಸವಿದೆ. ನೋಹನು ಆದಾಮ ಮತ್ತು ಹವ್ವಳಂತೆ ದೇವರನ್ನು ನೇರವಾಗಿ ಆರಾಧನೆ ಮಾಡುವುದಕ್ಕಾಗದ ಕಾರಣ ಆತನು ದೇವರಿಗೆ ಯಜ್ಞ ಸಮರ್ಪಣೆ ಮಾಡುವುದಕ್ಕೆ ತೊಡಗಿದನು. ಇದು ಪವಿತ್ರಗ್ರಂಥವು ಯಜ್ಞವೇದಿಯ ಬಗ್ಗೆ ಹೇಳಿರುವ ಮೊದಲ ವಚನವಾಗಿದೆ. ಇದು ಪೂರ್ಣಾಂಗ ಹೋಮವಾಗಿತ್ತು. ಇದು ಬಹಳಷ್ಟು ಸಲ ಅರ್ಪಿಸುವ ಮೊದಲಿನಿಂದ ಅಭ್ಯಾಸದಲ್ಲಿದ್ದ ಒಂದು ಯಜ್ಞವಾಗಿತ್ತು ತನ್ನನ್ನು ರಕ್ಷಿಸಿದ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಸಲುವಾಗಿ ನೋಹನು ಈ ಯಜ್ಞವನ್ನು ಸಮರ್ಪಿಸಿದನು (ಅರಣ್ಯಕಾಂಡ 15:1–11 ವಚನಗಳ ಜೊತೆ ಹೋಲಿಸಿರಿ).

ಆದಿಕಾಂಡ 9:2–4 ವಚನಗಳನ್ನು ಓದಿರಿ. ಜಲಪ್ರಳಯವು ಮನುಷ್ಯನ ಆಹಾರ ಕ್ರಮದ ಮೇಲೆ ಯಾವ ಪರಿಣಾಮ ಬೀರಿತು? ದೇವರು ಆಹಾರದ ವಿಷಯದಲ್ಲಿ ಮಾಡಿದ ನಿರ್ಬಂಧನೆಗಳ ಹಿಂದೆ ಯಾವ ನಿಯಮವು ಇದೆ?

ಜಲಪ್ರಳಯದ ಪರಿಣಾಮವಾಗಿ ಸಸ್ಯವರ್ಗವು ನಾಶವಾದ ಕಾರಣ ಮನುಷ್ಯನ ಆಹಾರಕ್ಕೆ ಅಗತ್ಯವಾದ ಕಾಯಿಪಲ್ಯೆಗಳು ಎಂದಿನಂತೆ ಸಿಗದೆ ಹೋದವು. ಆದ್ದರಿಂದ ದೇವರು ಮನುಷ್ಯರಿಗೆ ಮಾಂಸಾಹಾರವನ್ನು ಸೇವಿಸುವುದಕ್ಕೆ ಅನುಮತಿ ಕೊಟ್ಟನು. ಆಹಾರ ಪದ್ಧತಿಯ ಬದಲಾವಣೆಯಿಂದ ಸೃಷ್ಟಿಯ ಮೂಲದಿಂದಲೂ ಮನುಷ್ಯರ ಮತ್ತು ಪ್ರಾಣಿಗಳ ನಡುವೆ ಇದ್ದ ಸಂಬಂಧವೂ ಸಹ ಬದಲಾಯ್ತು.

ಸೃಷ್ಟಿಯ ವಿವರಣೆಯಲ್ಲಿ ಮಾನವರು ಮತ್ತು ಪ್ರಾಣಿಗಳು ಒಂದೇ ತೆರನಾದ

ಆಹಾರ ಪದ್ಧತಿಯನ್ನು ಹೊಂದಿದ್ದವು ಹಾಗಾಗಿ ಇವುಗಳ ನಡುವೆ ಯಾವ ಬೆದರಿಕೆಯೂ ಇರಲಿಲ್ಲ. ಜಲಪ್ರಳಯದ ನಂತರದ ಕಾಲದಲ್ಲಿ ಮನುಷ್ಯರು ತಮ್ಮ ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದುದರಿಂದ ಸಂಬಂಧವು ಭಯ ಮತ್ತು ಗಾಬರಿಗೆ ಈಡಾಯ್ತು (ಆ.ಕಾಂಡ 9:2). ಒಮ್ಮೆ ಮಾನವರು ಮತ್ತು ಪ್ರಾಣಿಗಳು ಆಹಾರಕ್ಕಾಗಿ ಪರಸ್ಪರ ಕೊಲ್ಲಲು ತೊಡಗಿಕೊಂಡಾಗಿನಿಂದ ಏದೇನ್ ತೋಟದಲ್ಲಿ ಅನುಭವಿಸಿದ್ದಂತಹ ಸೌಹಾರ್ದಯುತ ಸಂಬಂಧದಲ್ಲಿ ವ್ಯತ್ಯಾಸವಾದ ಬೆಳವಣಿಗೆಯಾಯ್ತು.

ಏನೇ ಆಗಲಿ, ದೇವರ ಸಹನೆಗೆ (ಸ್ಯೆರಣೆಗೆ) ಎರಡು ನಿರ್ಬಂಧಗಳಿವೆ. ಮೊದಲನೆಯದಾಗಿ ಎಲ್ಲಾ ಪ್ರಾಣಿಗಳು ಆಹಾರಕ್ಕೆ ಸಮರ್ಪಕವಾದವುಗಳಲ್ಲ. ಆದುದರಿಂದ ಸೃಷ್ಟಿಯ ಕ್ರಮದಲ್ಲಿ ಭಾಗವಾಗಿರುವ ಪ್ರಾಣಿಗಳನ್ನು ಶುದ್ಧ ಮತ್ತು ಅಶುದ್ಧ ಎಂಬುದಾಗಿ ಪ್ರತ್ಯೇಕಪಡಿಸುವುದು ಮೊದಲ ನಿರ್ಬಂಧವಾಗಿದೆ (ಆ.ಕಾಂಡ 8:19,20 ವಚನಗಳನ್ನು ಆದಿಕಾಂಡ 1:21,24 ವಚನಗಳೊಂದಿಗೆ ಹೋಲಿಸಿರಿ). ಎರಡನೆಯದು ಹೊಸದು ಮತ್ತು ಸ್ಪಷ್ಟವಾಗಿರುವಂಥದ್ದು ರಕ್ತವು ಸಕಲ ಜೀವಿಗಳಿಗೂ ಪ್ರಾಣಾಧಾರವಾಗಿರುವುದರಿಂದ ಅದನ್ನು ಎಷ್ಟು ಮಾತ್ರಕ್ಕೂ ಭುಜಿಸಬಾರದು (ಆ.ಕಾಂಡ 9:4).

**ಗುರುವಾರ** **ಏಪ್ರಿಲ್ 21**

## ಒಡಂಬಡಿಕೆ : ಭಾಗ–2

ಆದಿಕಾಂಡ 8:21–9:1 ವಚನಗಳನ್ನು ಓದಿರಿ. ಜೀವಿಗಳನ್ನು ಸಂರಕ್ಷಣೆ ಮಾಡಲು ದೇವರು ಬದ್ಧತೆಯುಳ್ಳವನಾಗಿದ್ದಾನೆ ಇದರ ಮಹತ್ವವೇನು? ಈ ಬದ್ಧತೆಯನ್ನು ದೇವರ ಆಶೀರ್ವಾದಗಳು ಪೂರೈಸುತ್ತವೆ ಹೇಗೆ?

ಜೀವಿಗಳನ್ನು ಸಂರಕ್ಷಿಸಬೇಕೆಂಬ ದೇವರಚಿತ್ತವು ಆತನ ಕೃಪಾಕಾರ್ಯವಾಗಿದೆ ಇದು ಮನುಷ್ಯನ ಯೋಗ್ಯತೆಗೆ ಸಿಗುವ ಫಲಿತಾಂಶವಲ್ಲ. ಮನುಷ್ಯನು ಕೆಟ್ಟವನಾಗಿದ್ದಾಗ್ಯೂ ದೇವರು ಜೀವವನ್ನು ಸಂರಕ್ಷಿಸುವ ನಿರ್ಧಾರವನ್ನು ಮಾಡಿದ್ದಾನೆ (ಆ.ಕಾಂಡ 8:21). ಭೂಮಿಯು ಇರುವ ತನಕ ಬಿತ್ತನೆಯೂ ಕೊಯಿಲೂ, ಚಳಿಯೂ, ಸೆಕೆಯೂ, ಬೇಸಿಗೆ ಕಾಲವೂ ಹಿಮಕಾಲವೂ, ಹಗಲೂ ಇರುಳೂ ಇವುಗಳ ಕ್ರಮ ತಪ್ಪುವುದೇ ಇಲ್ಲ ಅಂದುಕೊಂಡನು ಎಂಬುದಾಗಿ ಆದಿಕಾಂಡ

8:22ನೇ ವಚನವು ತಿಳಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ದೇವರು ಎಂದಿಗೂ ತನ್ನ ಸೃಷ್ಟಿಯನ್ನು ತ್ಯಜಿಸುವುದಿಲ್ಲ. ಸತ್ಯವೇನೆಂದರೆ, ಈ ಕೆಳಗೆ ಹೇಳಿರುವ ವಚನವು ದೇವರ ಆಶೀರ್ವಾದಗಳ ಬಗ್ಗೆ ಮಾತಾಡುತ್ತವೆ ಮತ್ತು ಈ ಆಶೀರ್ವಾದಗಳೊಂದಿಗೆ ನಮ್ಮನ್ನು ಸೃಷ್ಟಿಯ ಮೂಲಕ್ಕೆ ಕರೆದೊಯ್ಯುತ್ತವೆ (ಆ.ಕಾಂಡ 1:22, 28 ಮತ್ತು 2:3). ಮಾನವರು ತಮ್ಮ ಜೀವನವನ್ನು ಸರಿಯಾದ ರೀತಿಯಲ್ಲಿ ಹೊಸದಾಗಿ ಆರಂಭಿಸುವಂತೆ ಕರ್ತನು ಮತ್ತೆ ಅವಕಾಶವನ್ನು ಕೊಡುತ್ತಾನೆ.

ಆದಿಕಾಂಡ 9:8–17 ವಚನಗಳನ್ನು ಓದಿರಿ. ಮುಗಿಲುಬಿಲ್ಲಿನ ಮಹತ್ವವೇನು? ಒಡಂಬಡಿಕೆಯ ಗುರುತನ್ನು (ಆದಿಕಾಂಡ 9:13) ಮತ್ತೊಂದು ಗುರುತಾದ "ಸಬ್ಬತ್ತಿಗೆ" ಸಂಬಂಧಪಡುತ್ತದೆ?

"ಪ್ರತಿಜ್ಞೆ (ಒಡಂಬಡಿಕೆ) ..... ಸ್ಥಾಪನೆ" ಈ ಪದವೃಂದವು ಮೂರುಸಲ ಪುನರಾವರ್ತನೆಗೊಂಡಿದೆ (ಆ.ಕಾಂಡ 9:9, 11, 17) ಇದು ದೇವರು ಮೊದಲು ಮಾಡಿದ ವಾಗ್ದಾನಗಳ ನೆರವೇರಿಕೆ ಮತ್ತು ಪರಾಕಾಷ್ಠೆಗೆ ಗುರುತಾಗಿದೆ (ಆ.ಕಾಂಡ 6:18).

ಆದಿಕಾಂಡ 9ನೇ ಅಧ್ಯಾಯದ ಮೊದಲ ಭಾಗವು 6 ದಿನಗಳ ಸೃಷ್ಟಿಯನ್ನು ವಿವರಿಸುವ ಒಂದನೇ ಅಧ್ಯಾಯದಂತೆ ಇದೆ. ಹಾಗೆಯೇ 9ನೇ ಅಧ್ಯಾಯದ ಎರಡನೇ ಭಾಗವು 6 ದಿನಗಳ ಸೃಷ್ಟಿಯ ನಂತರ 7ನೇ ದಿನದ ಸಬ್ಬತ್ತನ್ನು ವಿವರಿಸುವ 2ನೇ ಅಧ್ಯಾಯಕ್ಕೆ ಸಮಾನವಾಗಿದೆ. ಸಬ್ಬತ್ತಿನಂತೆಯೇ ಮುಗಿಲುಬಿಲ್ಲು ಸಹಾ ಒಡಂಬಡಿಕೆಯ ಗುರುತಾಗಿದೆ (ಆ.ಕಾಂಡ 9:13,14,16). ಇದನ್ನು ವಿ.ಕಾಂಡ 31:12–17ಕ್ಕೆ ಹೋಲಿಸಿರಿ ಮತ್ತು ಸಬ್ಬತ್ತಿನಂತೆಯೇ ಮುಗಿಲುಬಿಲ್ಲು ಸಹಾ ಜಾಗತಿಕ ಮಟ್ಟದ ವ್ಯಾಪಕತೆಯನ್ನು ಹೊಂದಿದೆ. ಇದು ಇಡೀ ಲೋಕಕ್ಕೆ ಅನ್ವಯವಾಗುತ್ತದೆ. ಯಾವ ರೀತಿಯಲ್ಲಿ ಸಬ್ಬತ್ತು ಸೃಷ್ಟಿಯ ಗುರುತಾಗಿ ಪ್ರತಿಯೊಬ್ಬರಿಗೂ ಪ್ರತಿಯೊಂದು ಪ್ರದೇಶಕ್ಕೂ ಕೊಡಲ್ಪಟ್ಟಿದೆಯೋ ಅದೇ ರೀತಿಯಲ್ಲಿ "ಇನ್ನು ಮುಂದೆ ನೀರಿನಿಂದ ಜಲಪ್ರಳಯವಾಗುವುದಿಲ್ಲವೆಂಬ" ವಾಗ್ದಾನವೂ ಸಹಾ ಪ್ರತಿಯೊಬ್ಬರಿಗೂ ಎಲ್ಲಾ ಪ್ರದೇಶಕ್ಕೂ ಕೊಡಲ್ಪಟ್ಟಿದೆ.

ನೀವು ಮುಂದಿನ ಸಲ ಮುಗಿಲುಬಿಲ್ಲನ್ನು ನೋಡುವಾಗ ದೇವರು ಮಾಡಿದ ಎಲ್ಲಾ ವಾಗ್ದಾನಗಳ ಬಗ್ಗೆ ಆಲೋಚಿಸಿರಿ. ಆ ಎಲ್ಲಾ ವಾಗ್ದಾನಗಳನ್ನು ನಾವು ಏಕೆ

ನಂಬಬೇಕು ಮತ್ತು ನಾವು ಅವುಗಳನ್ನು ನಂಬಬಹುದು ಎಂಬುದಾಗಿ ಮುಗಿಲುಬಿಲ್ಲು ನಮಗೆ ಹೇಗೆ ತೋರಿಸಿಕೊಡುತ್ತದೆ?

**ಶುಕ್ರವಾರ** **ಏಪ್ರಿಲ್ 22**

**ಹೆಚ್ಚಿನ ಚಿಂತನೆಗೆ :** ಜಲಪ್ರಳಯವಾಗುವದಕ್ಕೆ ಮುಂಚೆ ಇದ್ದ ಜನರ ನಡವಳಿಕೆ, ಮನೋಭಾವ ಮತ್ತು ಲೋಕದ ಪರಿಸ್ಥಿತಿಗೂ ಇಂದಿನ ಲೋಕದ ಜನರ ಪರಿಸ್ಥಿತಿಗೂ ನಡುವೆ ಇರುವ ಹೋಲಿಕೆಯು ಖಂಡಿತವಾಗಿಯೂ ಬುದ್ಧಿಪಾತವಾಗಿದೆ. ಅವರ ಕಾಲಕ್ಕೂ ನಮ್ಮ ಕಾಲಕ್ಕೂ ನಡುವೆ ಇರುವ ಸಮಾನತೆಗಳನ್ನು ಕಂಡುಕೊಳ್ಳಿರಿ. ನಿಶ್ಚಯವಾಗಿ ಹೇಳಬೇಕೆಂದರೆ ಮನುಷ್ಯರಲ್ಲಿರುವ ದುಷ್ಟತನ ಹೊಸದಾಗಿ ಹುಟ್ಟಿಕೊಂಡಿರುವ ವಿಷಯವಲ್ಲ.

"ಪ್ರತೀಕಾರವನ್ನು ಕೇಳುವಂತಹ ಜಲಪ್ರಳಯಕ್ಕೆ ಮುಂಚೆ ಇದ್ದ ಪಾಪಗಳು ಇಂದಿಗೂ ಸಹ ಅಸ್ತಿತ್ವದಲ್ಲಿವೆ. ದೇವರ ಭಯವು ಮನುಷ್ಯರ ಹೃದಯದಿಂದ ಹೊರಟು ಹೋಗಿದೆ ಮತ್ತು ಆತನ ಆಜ್ಞೆಗಳನ್ನು ಜನರು ಉದಾಸೀನದಿಂದ ಹಾಗೂ ಅಗೌರವದಿಂದ ಕಾಣತೊಡಗಿದ್ದಾರೆ. ಆ ಕಾಲದಲ್ಲಿದ್ದ ಜನರ ತೀವ್ರ ಲೌಕಿಕತನವನ್ನು ಈ ಸಂತತಿಯವರು ಸರಿಗಟ್ಟುತ್ತಿದ್ದಾರೆ.... ದೇವರು ಅವರು ತಿನ್ನುವುದನ್ನು ಮತ್ತು ಕುಡಿಯುವುದನ್ನು ಎಂದಿಗೂ ಖಂಡಿಸಲಿಲ್ಲ. ಆದರೆ ಅವರು ಅನ್ನಪಾನಗಳನ್ನು ಅನುಗ್ರಹಿಸಿದ ದೇವರಿಗೆ ಕೃತಜ್ಞತೆಯನ್ನು ತೋರದಿದ್ದುದೇ ಅವರ ಪಾಪವಾಗಿತ್ತು. ಅವರು ಹೊಟ್ಟೆಬಾಕತನಕ್ಕೆ ಕಡಿವಾಣ ಹಾಕದೆ ನಾಲಿಗೆ ರುಚಿಯನ್ನು ತಣಿಸುತ್ತಾ ಕೀಳುತನಕ್ಕೆ ಇಳಿದುಬಿಟ್ಟರು. ಮದುವೆ ಮಾಡಿಕೊಡುವುದು ಮತ್ತು ಮಾಡಿಕೊಳ್ಳುವುದು ದೇವರಚಿತ್ತಕ್ಕೆ ವಿರುದ್ಧವಾದುದೇನಾಗಿರಲಿಲ್ಲ. ಮದುವೆ ಎಂಬುದು ದೇವರ ಕ್ರಮವಾಗಿತ್ತು, ಮದುವೆಯು ದೇವರು ಸ್ಥಾಪನೆ ಮಾಡಿದ ಸಂಸ್ಕಾರಗಳಲ್ಲಿ ಮೊದಲನೆಯದಾಗಿತ್ತು. ಮದುವೆಯನ್ನು ಕುರಿತು ದೇವರು ವಿಶೇಷವಾದ ನಿರ್ದೇಶನಗಳನ್ನು ಕೊಟ್ಟಿದ್ದನು. ಅದಕ್ಕೆ ದೇವರು ಪರಿಶುದ್ಧತೆ ಮತ್ತು ಸೌಂದರ್ಯದ ಹೊದಿಕೆಯನ್ನು ಹೊದಿಸಿದ್ದನು. ಆದರೆ ಈ ನಿರ್ದೇಶನಗಳನ್ನು ಜನರು ಮರೆತರು ಮತ್ತು ಮದುವೆಯು ವಿಕೃತಗೊಂಡು ಕಾಮದ ಹಸಿವನ್ನು ತೀರಿಸಿಕೊಳ್ಳುವುದಕ್ಕೆ ಮಾರ್ಗವಾಯ್ತು. ಇದೇ ತೆರನಾದ ಪರಿಸ್ಥಿತಿಯು ಈವಾಗ ನಮ್ಮ ಮಧ್ಯದಲ್ಲೂ ಸಹಾ ಅಸ್ತಿತ್ವದಲ್ಲಿದೆ. ಎಲ್ಲವನ್ನೂ ಅತಿಯಾಗಿ ನಡೆಸುವುದು ಇವತ್ತು ಕಾನೂನು

ಬದ್ಧವಾಗಿದೆ, ಮೋಸ, ಲಂಚ (ಭ್ರಷ್ಟತೆ) ಮತ್ತು ಕಳ್ಳತನ ಇವುಗಳನ್ನು ಉನ್ನತ ಸ್ಥಳಗಳಲ್ಲಿ ಮತ್ತು ಸಣ್ಣ ಸ್ಥಳಗಳಲ್ಲಿ ಖಂಡಿಸಲಾಗುತ್ತಿಲ್ಲ. ಸುದ್ದಿ ಮಾಧ್ಯಮಗಳಲ್ಲಿ ಕೊಲೆ ಪ್ರಕರಣಗಳ ಸಾಲುಸಾಲು. ಎಲ್ಲಾ ದೇಶಗಳಲ್ಲಿ ಅರಾಜಕತೆ ವ್ಯಾಪಿಸಿಕೊಂಡಿದೆ, ಕಾಲಕಾಲಕ್ಕೆ ಏಳುವ ದಂಗೆಗಳು ಲೋಕದಲ್ಲಿ ಭಯಭೀತಿಯನ್ನು ಹುಟ್ಟಿಸುತ್ತಿವೆ. ಇವುಗಳೆಲ್ಲಾ ಆಸೆ ಅಕ್ರಮಗಳ ಬೆಂಕಿ ಹೊತ್ತಿ ಉರಿಯುವುದಕ್ಕೆ ಒಂದಕ್ಕೊಂದು ಹೆಚ್ಚುತ್ತಾ ಹೋಗುತ್ತಿರುವುದರ ಸೂಚಕಗಳಾಗಿವೆ. ಒಮ್ಮೆ ಇವುಗಳ ಮೇಲಿನ ನಿಯಂತ್ರಣ ತಪ್ಪಿಹೋದರೆ ಭೂಮಿಯ ಗೋಳಾಟ ತುಂಬಿಕೊಳ್ಳುತ್ತದೆ. ಆತ್ಮನು ನೀಡಿದ ಜಲಪ್ರಳಯಕ್ಕೆ ಮೊದಲು ಲೋಕದಲ್ಲಿದ್ದ ಪರಿಸ್ಥಿತಿಯ ಚಿತ್ರವು ಇಂದಿನ ಆಧುನಿಕ ಲೋಕವು ಬಹಳ ವೇಗವಾಗಿ ತಲುಪುತ್ತಿರುವ ಪರಿಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಇಂದಿಗೂ ಪ್ರಸಕ್ತ ಶತಮಾನದಲ್ಲಿ ಕ್ರೈಸ್ತಧರ್ಮವನ್ನು ಆಚರಿಸುವ ದೇಶಗಳಲ್ಲಿಯೂ ಸಹ ಪೂರ್ವದಲ್ಲಿ ಲೋಕವು ನಾಶವಾಗುವುದಕ್ಕೆ ಕಾರಣವಾದ ಭಯಂಕರವಾದ ಅಕ್ರಮ ಅಪರಾಧಗಳು ಪ್ರತಿದಿನವೂ ನಡೆಯುತ್ತಿದೆ" ಎಲೆನ್ ಜಿ ವೈಟಮ್ಮನವರ "ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು" ಪುಸ್ತಕದಲ್ಲಿ ಪುಟ 101, 102.

## ಚರ್ಚಿಸಬೇಕಾದ ಪ್ರಶ್ನೆಗಳು

1. ಜಲಪ್ರಳಯಕ್ಕೆ ಮುಂಚೆ ಇದ್ದ ಸಮಾಜದಲ್ಲಿನ ಮತ್ತು ನಮ್ಮ ಇಂದಿನ ಸಮಾಜದಲ್ಲಿನ ಸಾಮಾನ್ಯ ಗುಣಲಕ್ಷಣಗಳೇನು? ಇವುಗಳೆಲ್ಲದರ ಹೊರತಾಗಿ ದೇವರು ಇನ್ನೂ ಈಗಲೂ ಲೋಕವನ್ನು ಪ್ರೀತಿಸುವವನಾಗಿದ್ದು ತಾನು ರಕ್ಷಿಸಬೇಕಾದವರನ್ನು ಹುಡುಕುವವನಾಗಿದ್ದಾನೆ. ಈ ಸಾಮಾನ್ಯ ಗುಣಲಕ್ಷಣಗಳು ದೇವರ ಕೃಪೆಯ ಬಗ್ಗೆ ನಮಗೆ ಏನನ್ನು ಬೋಧಿಸುತ್ತವೆ?

2. ಕೆಲ ಜನರು ನೋಹನ ಕಾಲದ ಜಲಪ್ರಳಯವು ಸ್ಥಳೀಯವಾಗಿ ನಡೆದ ಘಟನೆ ಎಂದು ವಾದಿಸುತ್ತಾರೆ. ಇದರಲ್ಲಿರುವ ತಪ್ಪಾದ ಆಲೋಚನೆ ಏನು? ಇದು ನಿಜವಾಗಿದ್ದರೆ, ಪ್ರತೀ ಸ್ಥಳೀಯ ಜಲಪ್ರವಾಹಗಳು (ಪ್ರತಿ ಮುಗಿಲುಬಿಲ್ಲು) ದೇವರನ್ನು ಸುಳ್ಳುಗಾರನನ್ನಾಗಿ ಮಾಡುತ್ತಿದ್ದವು ಯಾಕೆ?